


ಬೋಯಿಂಗ್ 747. ಇದು ವಿಮಾನವೊಂದರ ಹೆಸರು ಮಾತ್ರವಲ್ಲ. ವಾಯುಯಾನ ಕ್ಷೇತ್ರದಲ್ಲಿ ಉಂಟಾದ ಸಂಚಲನ, ಕ್ರಾಂತಿಯ ಸಂಕೇತ. 'ಆಗಸದ ರಾಣಿ' ಎಂದೇ ಪ್ರಸಿದ್ಧವಾದ 'ಬೋಯಿಂಗ್ 747' ತನ್ನ ಅಗಾಧ ಗಾತ್ರ ಹಾಗೂ ಸಾಮರ್ಥ್ಯದಿಂದಾಗಿ ದಶಕಗಳ ಕಾಲ ವಿಮಾನಯಾನ ಕ್ಷೇತ್ರದ ಕಣ್ಮಣಿಯಾಗಿತ್ತು. ವಾಯುಯಾನ ಕ್ಷೇತ್ರದ ವಹಿವಾಟಿಗೆ ಹೊಸ ಸ್ವರೂಪ ನೀಡಿದ್ದ ಈ ಜಂಬೋ ಜೆಟ್, ಶ್ರೀಮಂತರಿಗೆ ಸೀಮಿತವಾಗಿದ್ದ ವಿಮಾನ ಪ್ರಯಾಣ ಜನಸಾಮಾನ್ಯರ ಕೈಗೆಟುಕಲಿಕ್ಕೆ ಪ್ರಮುಖ ಕಾರಣವಾಗಿತ್ತು. ಅತ್ಯಾಧುನಿಕ ತಂತ್ರಜ್ಞಾನ, ಸುರಕ್ಷತೆ, ದಕ್ಷತೆ ಹಾಗೂ ಸೌಕರ್ಯಗಳ ಕಾರಣದಿಂದಲೂ ಪ್ರಸಿದ್ಧವಾಗಿತ್ತು. ಬದಲಾದ ಸನ್ನಿವೇಶದಲ್ಲಿ, 'ಬೋಯಿಂಗ್ 747' ನೇಪಥ್ಯಕ್ಕೆ ಸರಿದಿದೆ. ಜಂಬೋ ಜೆಟ್ ವಿಮಾನಗಳ ತಯಾರಿಕೆಯನ್ನು ಬೋಯಿಂಗ್ ನಿಲ್ಲಿಸಿದೆ. ಆದರೆ, ಬಾನದಾರಿಯಲ್ಲಿ ಈ ವಿಮಾನ ನೆಟ್ಟ ಮೈಲಿಗಲ್ಲುಗಳು ಚರಿತ್ರೆಯಲ್ಲಿ ಉಳಿಯುವಂತಹವು.

■ ಡಾ. ಬಿ.ಆರ್. ಗುರುಪ್ರಸಾದ್